■ ಹನಿ

## ಕಥೆ ಮುಗಿಯಿತೆ?

ಸೆರೆನಾ ವಿಲಿಯಮ್ಸ್ ಜಗತ್ತು ಕಂಡ ಅತ್ಯಂತ ಶಕ್ತಿಶಾಲಿ ಟೆನಿಸ್ ಆಟಗಾರ್ತಿ. ಈಕೆಯ ಸರ್ವ್ ಮತ್ತು ಮುಂಗೈ ಹೊಡೆತಗಳನ್ನು ಎದುರಿಸಲು ಎದುರಾಳಿಗಳು ನಡುಗುವುದು ಸಹಜ. 2014ರಲ್ಲಿ ಎಲ್ಲ ನಾಲ್ಕು ಪ್ರಮುಖ ಟೆನಿಸ್ ಗ್ರ್ಯಾನ್‌ಸ್ಲಾಮ್‌ಗಳಲ್ಲೂ ಟ್ರೋಫಿ ಗೆಲ್ಲುವ ನೆಚ್ಚಿನ ಆಟಗಾರ್ತಿಯಾಗಿದ್ದ ಸೆರೆನಾ, ವರ್ಷದ ಮೊದಲ ಗ್ರ್ಯಾನ್‌ಸ್ಲ್ಯಾಮ್ ನಲ್ಲೇ ಸೋತು ನಿರ್ಗಮಿಸಿದ್ದಾಳೆ. ಆಸ್ಟ್ರೇಲಿಯನ್ ಓಪನ್ ಗ್ರ್ಯಾನ್‌ಸ್ಲಾಮ್‌ನ 4ನೇ ಸುತ್ತಿನಲ್ಲಿ ಅನಾ ಇವಾನೊವಿಕ್ ವಿರುದ್ಧ ಸೆರೆನಾ ಸೋತದ್ದು ನಿಜಕ್ಕೂ ಅಚ್ಚರಿಯ ಫಲಿತಾಂಶವೇ. ಈ ಹಿಂದೆ 4 ಸಲ ಇಬ್ಬರೂ ಓಪನ್ ಟೂರ್ನಿಯಲ್ಲಿ ಪರಸ್ಪರ ಎದುರಿಸಿದ್ದರೂ ಅನಾ ಒಂದು ಸೆಟ್ ಕೂಡಾ ಗೆಲ್ಲಲು ಆಗಿರಲಿಲ್ಲ. 'ಪ್ರಾಕ್ಟೀಸ್ ವೇಳೆಯಲ್ಲೇ ಸೆರೆನಾಗೆ ಬೆನ್ನುನೋವು ಕಾಣಿಸಿಕೊಂಡಿತ್ತು. ಹಾಗಾಗಿ ಈ ಸೋಲು' ಎಂದು ಸೆರೆನಾಳ ಕೋಚ್ ಹೇಳಿದ್ದಾರೆ. 'ಅನಾ ಅದ್ಭುತವಾಗಿ ಆಡಿದ್ದಾಳೆ. ಹಾಗಾಗಿ ನನ್ನ ಸೋಲು ಅನಿವಾರ್ಯವಾಯಿತು' ಎಂದು ಸೆರೆನಾ ಹೇಳಿದ್ದಾಳೆ.



33ರ ಹರೆಯದ ಸೆರೆನಾ ಟೆನಿಸ್ ಪಾರಮ್ಯ ಮುಗಿಯಿತೆ.. ಎಂಬ ಚರ್ಚೆ ಈಗ ಶುರುವಾಗಿದೆ. ಕಳೆದ 14 ವರ್ಷಗಳಿಂದ ನಿರಂತರವಾಗಿ ಗೆಲ್ಲುತ್ತಿರುವ ಸೆರೆನಾ, ಈಗಾಗಲೆ 17 ಗ್ರ್ಯಾನ್‌ಸ್ಲಾಮ್ ಗೆಲುವನ್ನು ತನ್ನ ಖಾತೆಗೆ ಸೇರಿಸಿಕೊಂಡಿದ್ದಾಳೆ. 22 ಗ್ರ್ಯಾನ್‌ಸ್ಲಾಮ್ ಗೆದ್ದಿರುವ ಸ್ಟೆಫಿ ಗ್ರಾಫ್ ಮತ್ತು ತಲಾ 18 ಗ್ರ್ಯಾನ್‌ಸ್ಲಾಮ್ ಗೆದ್ದಿರುವ ಕ್ರಿಸ್ ಎವರ್ಟ್ ಮತ್ತು ಮಾರ್ಟಿನಾರ ದಾಖಲೆ ಮುರಿಯುವ ಸಾಧ್ಯತೆ ಸೆರೆನಾಗೆ ಇದೆ ಎಂದೇ ಈವರೆಗೆ ಭಾವಿಸಲಾಗಿತ್ತು. ಬೆನ್ನುನೋವು ಆಕೆಯ ನಾಗಾಲೋಟಕ್ಕೆ ತಡೆ ಒಡ್ಡುವ ಸಾಧ್ಯತೆ ಹೆಚ್ಚಾಗಿದೆ.

2002ರಿಂದ 'ವಿಶ್ವದ ನಂಬರ್ ಒನ್ ಆಟಗಾರ್ತಿ' ಎಂದು ಆರು ಸಲ ಪಟ್ಟ ಗಳಿಸಿರುವ ಸೆರೆನಾ ಈ ಒಂದು ಸೋಲಿನಿಂದ ಈಗ 'ನಂಬರ್ ಒನ್' ಪಟ್ಟ ಕಳೆದುಕೊಳ್ಳುವುದಿಲ್ಲ ಎನ್ನುವುದು ನಿಜ. ಬೆನ್ನುನೋವನ್ನು ಪರಿಹರಿಸಿಕೊಂಡು ಮುಂದಿನ ಗ್ರ್ಯಾನ್‌ಸ್ಲಾಮ್‌ಗೆ ಖಂಡಿತಾ ಆಕೆ ಸಿದ್ಧಳಾಗುತ್ತಾಳೆ. ಕಳೆದ ವರ್ಷ (2013) ಆಗಸ್ಟ್ ಬಳಿಕ ಯಾವ ಪಂದ್ಯದಲ್ಲೂ ಸೋಲದ ಸೆರೆನಾ ಈ ವರ್ಷದ ಆರಂಭದಲ್ಲೇ ಸೋಲು ಕಂಡಿರುವುದು ಅಭಿಮಾನಿಗಳನ್ನು ಕಂಗೆಡಿಸಿದೆ. ಸೆರೆನಾ ಫೀನಿಕ್ಸ್‌ನಂತೆ ಮರಳಿ ಬರುವುದನ್ನೇ ಅವರು ಕಾಯುತ್ತಿದ್ದಾರೆ. ಫ್ರೆಂಚ್ ಓಪನ್ ಸನಿಹದಲ್ಲೇ ಇರುವುದು ಅವರ ನಿರೀಕ್ಷೆಯನ್ನು ಹೆಚ್ಚಿಸಿದೆ.

## ಅಧ್ಯಕ್ಷರ ಹೆಂಡತಿ

ಫ್ರಾನ್ಸ್ ಅಧ್ಯಕ್ಷ ಫ್ರಾಂಕೋಸ್ ಹಾಲಂಡ್ ಅವರ ಅಧಿಕೃತ ಜತೆಗಾರ್ತಿ (ಕೂಡಿಕೆ ಪತ್ನಿ) ವಾಲರೀ ಟ್ರೀರ್‌ವೀಲರ್ ಭಾರತದ ಭೇಟಿ ಕುತೂಹಲಕರ. ಈ ಭೇಟಿ ಹಲವು ತಿಂಗಳ ಹಿಂದೆಯೇ ನಿಗದಿಯಾಗಿದ್ದರೂ ಈಗ ಗಂಡನ ರಹಸ್ಯ ಪ್ರಣಯ ಪ್ರಸಂಗ ಬಯಲಾದ ಬಳಿಕ ಭಾರತಕ್ಕೆ ಭೇಟಿ ನೀಡಿರುವುದು ಕುತೂಹಲ ಕೆರಳಲು ಕಾರಣ. 2005ರಿಂದ ಜತೆಗಾರನಾಗಿದ್ದ ಗಂಡ, ಜೂಲಿ ಗೇಯಟ್ ಎಂಬ ಚಿತ್ರನಟಿಯ ಜತೆ ರಹಸ್ಯ ಸಂಬಂಧ ಹೊಂದಿದ್ದು ಕಳೆದ ವಾರವಷ್ಟೇ ಬಯಲಾದ ಬಳಿಕ ಆಘಾತಗೊಂಡ ವಾಲರೀ ಆಸ್ಪತ್ರೆ ಸೇರಿದ್ದರು. ಆಸ್ಪತ್ರೆಯಿಂದ ಬಿಡುಗಡೆಯಾದ ಬಳಿಕ ರೆಸ್ಟ್ ತೆಗೆದುಕೊಳ್ಳಬೇಕೆಂಬ ಆಪ್ತರ ಸಲಹೆ ಧಿಕ್ಕರಿಸಿ ಆಕೆ ಭಾರತದ ಭೇಟಿಗೆ ನಿರ್ಧರಿಸಿದ್ದಾರೆ.



ವಾಲರೀ ಟೀವಿ ಪತ್ರಕರ್ತೆ ಆಗಿದ್ದಾಕೆ. ಫ್ರಾಂಕೋಸ್ ಹಾಲಂಡ್ ಭೇಟಿಯಾದದ್ದು 1988ರಲ್ಲಿ. ಆಗ ಫ್ರಾಂಕೋಸ್ ತನ್ನ ಎರಡನೆಯ ಕೂಡಿಕೆ ಪತ್ನಿ ಸೆಗೆಲೋವ್ ರಾಯಲ್ ಜತೆಗಿದ್ದರು. 2005ರಲ್ಲಿ ಫ್ರಾಂಕೋಸ್ ಜತೆ ಕೂಡಿಕೆ ನಡೆಯಿತು. ಆದರೆ ಈ ಸುದ್ದಿ ಬಹಿರಂಗವಾದದ್ದು 2010ರಲ್ಲಿ. ಏಕೆಂದರೆ ಫ್ರಾಂಕೋಸ್ ತನ್ನ ಎರಡನೆ ಕೂಡಿಕೆ ಪತ್ನಿಯಿಂದ ಡೈವೋರ್ಸ್ ಪಡೆಯಲು 3 ವರ್ಷ ಹಿಡಿಯಿತು. ಅಲ್ಲಿಂದೀಚೆಗೆ ಅಮೆರಿಕದ ಅಧ್ಯಕ್ಷರ ಅಧಿಕೃತ ನಿವಾಸ 'ಎಲ್ಸೀ ಪ್ಯಾಲೇಸ್'ನಲ್ಲೇ ವಾಲರೀ ವಾಸ. ಆದರೆ ಭಾರತದಿಂದ ವಾಪಸಾದ ಬಳಿಕ ಆಕೆ ಎಲ್ಸೀ ಪ್ಯಾಲೇಸ್‌ಗೆ ಮರಳುವುದಿಲ್ಲ ಎಂಬ ಸುದ್ದಿ ಹಬ್ಬಿದೆ. ಈ ಮಧ್ಯೆ ಫ್ರಾನ್ಸ್ ಅಧ್ಯಕ್ಷ ಫ್ರಾಂಕೋಸ್ ಮುಂದಿನ ತಿಂಗಳು ಅಮೆರಿಕ ಪ್ರವಾಸ ಕೈಗೊಳ್ಳಲಿದ್ದು, ಆಗ ಅಧಿಕೃತ ಪತ್ನಿ ಜತೆಗಿರುವುದಿಲ್ಲ ಎಂಬ ಸುದ್ದಿಯೂ ಹಬ್ಬಿದೆ.

ವಾಲರೀ ಛಾತಿವಂತೆ. ಹಿಂದೆ ತನ್ನ ಎರಡು ಮದುವೆಗಳಲ್ಲೂ ಭ್ರಮನಿರಸನ ಹೊಂದಿ ಡೈವೋರ್ಸ್ ಪಡೆದಾಕೆ. ಎರಡನೇ ಮದುವೆಯಿಂದ ಆಗಿರುವ ಮೂರು ಮಕ್ಕಳೂ ಇದ್ದಾರೆ. ಆಕೆ ಪತ್ರಕರ್ತೆಯ ಕೆಲಸಕ್ಕೇ ಮರಳಬಹುದೆ ಎನ್ನುವುದೀಗ ಕುತೂಹಲದ ಸಂಗತಿ. ವಿಶ್ವಾಸದ್ರೋಹದ ಆರೋಪದ ಹೊರತಾಗಿಯೂ ಅಧ್ಯಕ್ಷ ಹಾಲಂಡ್ ಫ್ರಾನ್ಸಿನಲ್ಲಿ ಜನಪ್ರಿಯತೆಯನ್ನು ಕಳೆದುಕೊಂಡಿಲ್ಲ ಎನ್ನುವುದು ಚೋದ್ಯದ ಸಂಗತಿ.

Printed and Published by S.V. Srinivasan on behalf of The Printers (Mysore) Private Ltd. Printed at Rajhans Enterprises, No.134, 4th Main Road, Industrial Town, Rajajinagar, Bangalore- 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: K.N. TILAK KUMAR.
Editorial Office: 75, M.G Road, Bangalore-560 001 E-mail:editorsu@sudha.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65